**<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಸ್ಪೆಷಲ್ ಸಿ. ನಂ.113/2023</u>**

ದಿನಾಂಕ 31.10.2025
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

ಚಾಸಾ - 17 ಪ್ರಾಸಾ - 16

| | | |
|---|---|---|
| ಹೆಸರು | ಃ | ಮೋಹನ್ ಕುಮಾರ್ |
| ತಂದೆಯ ಹೆಸರು | ಃ | ಶಿವಲಿಂಗಯ್ಯ |
| ವಯಸ್ಸು | ಃ | 55 ವರ್ಷ |
| ಉದ್ಯೋಗ | ಃ | ಡಿವೈಎಸ್‌ಪಿ, ಆನೇಕಲ್ ಪೊಲೀಸ್ ಠಾಣೆ |
| ವಾಸಸ್ಥಳ | ಃ | ಬೆಂಗಳೂರು |

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

ಜನವರಿ 2023 ರಿಂದ ಜುಲೈ 2023 ರವರೆಗೆ ನಾನು ಚನ್ನಪಟ್ಟಣ ಡಿವೈಎಸ್‌ಪಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ರಾಮನಗರ ಜಿಲ್ಲೆ ಇವರ ಆದೇಶ ಪತ್ರವನ್ನು ಪಡೆದು ಈ ಕಡತವನ್ನು ದಿಃ 10.04.2023 ರಂದು ಮುಂದಿನ ತನಿಖೆಗೆಂದು ಪ್ರಾಸಾ.15 ರಿಂದ ಪಡೆದು ತನಿಖೆ ಮುಂದುವರಿಸಿರುತ್ತೇನೆ.

3. ದಿನಾಂಕ 11.04.2023 ರಂದು ಪಿರ್ಯಾದಿ ತೋರಿಸಿದಂತಹ ಸ್ಥಳದಲ್ಲಿ ಮಧ್ಯಾಹ್ನ 4 ಗಂಟೆಯಿಂದ 4.45 ರ ಸಮಯದಲ್ಲಿ ಪಂಚರಾದ ಗುಡಿಯಯ್ಯ ಮತ್ತು ಮುದ್ದಯ್ಯ ಅವರ ಸಮಕ್ಷಮದಲ್ಲಿ ನಿ.ಪಿ.2 ರ ಮಹಜರ್ ತಯಾರಿಸಲಾಗಿದೆ. ಮಹಜರ್ ನಲ್ಲಿರುವಂತಹ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಕೃತ್ಯ ನಡೆದ ಸ್ಥಳದ ಎರಡು ಛಾಯಾಚಿತ್ರಗಳನ್ನು ತೆಗೆದಿದ್ದು ಕಚ್ಛಾ ನಕ್ಷೆಯನ್ನೂ ಸಹ ತಯಾರಿಸಲಾಗಿದೆ. ಸದರಿ ಎರಡು ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ನಿ.ಪಿ.3 ಮತ್ತು 4 ಎಂದು ಈಗಾಗಲೇ

ಗುರುತಿಸಲಾಗಿದೆ. ಕಚ್ಚಾ ನಕ್ಷೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.15 ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.15(ಎ) ಎಂದು ಗುರುತಿಸಲಾಯಿತು. ಅದೇ ದಿನ ಛಾಯಾಚಿತ್ರವನ್ನು ತೆಗೆದಂತ ನಮ್ಮ ಠಾಣಾ ಸಿಬ್ಬಂದಿಯಾದ ಪ್ರಾಸಾ 14 ರವರಿಂದ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ.65ಬಿ ಅನ್ವಯ ಪ್ರಮಾಣ ಪತ್ರವನ್ನು ಪಡೆದುಕೊಂಡೆ .ಅದು ನಿಶಾನೆ ಪಿ 13 ಇದ್ದು , ಅದನ್ನು ಸ್ವೀಕರಿಸಿದ ಸಲುವಾಗಿ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಶಾನೆ ಪಿ 13(ಬಿ) ಎಂದು ಗುರುತಿಸಲಾಯಿತು.

4. ದಿನಾಂಕ 02.04.2023 ರಂದು ಪಿರ್ಯಾದುದಾರಳು ಮತ್ತು ಆರೋಪಿಗಳ ಜಾತಿ ಪ್ರಮಾಣ ಪತ್ರವನ್ನು ನೀಡುವಂತೆ ಚನ್ನಪಟ್ಟಣ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿರುತ್ತೇನೆ ಹಾಗೂ ಕೃತ್ಯ ನಡೆದ ಜಮೀನಿಗೆ ಸಂಬಂಧಿಸಿದಂತ ಮಾಲೀಕತ್ವದ ದಾಖಲಾತಿಯನ್ನು ನೀಡುವಂತೆ ಸಹ ಮನವಿ ಮಾಡಿಕೊಂಡೆ .

5. ದಿನಾಂಕ 15.04.2023 ರಂದು ಸಾಕ್ಷಿದಾರರಾದ ನಿಂಗರಾಜು, ಸಿದ್ದರಾಮು, ಮರಿಮುದ್ದಯ್ಯ, ಚನ್ನರಾಜು, ಗುಡಿಯಯ್ಯ ಮತ್ತು ಮುದ್ದಯ್ಯ ಇವರುಗಳ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

6. ದಿನಾಂಕ 09.05.2023 ರಂದು ಆರೋಪಿಗಳು ನಿರೀಕ್ಷಣಾ ಜಾಮೀನು ಪಡೆದು ನನ್ನ ಮುಂದೆ ಠಾಣೆಯಲ್ಲಿ ಹಾಜರಾಗಿದ್ದು, ದಸ್ತಗಿರಿ ನಿಯಮ ಪಾಲಿಸಿ ಅವರನ್ನು ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಸದರಿ ಆರೋಪಿಗಳು ಇಂದು ನ್ಯಾಯಾಲಯದ ಮುಂದೆ ಇರುತ್ತಾರೆ.

7. ದಿನಾಂಕ 18.05.2023 ರಂದು ಸಾಕ್ಷಿದಾರರಾದ ತಮ್ಮಯ್ಯ, ರವಿ, ಮಲ್ಲಿಕಾರ್ಜುನ್, ರೇಣುಕ, ಕೃಷ್ಣೇಗೌಡ, ರಾಜು ಶೆಟ್ಟಿ, ಇವರುಗಳ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅವರುಗಳಲ್ಲಿ ಪ್ರಾಸಾ 5 ತಮ್ಮಯ್ಯು, ಪ್ರಾಸಾ 6 ರವಿ, ಪ್ರಾಸಾ 7 ಮಲ್ಲಿಕಾರ್ಜುನ್, ಪ್ರಾಸಾ 8 ರೇಣುಕಾ, ಪ್ರಾಸಾ 10 ರಾಜು ಶೆಟ್ಟಿ, ಪ್ರಾಸಾ 11 ಗುಡಿಯಯ್ಯ,

ಮತ್ತು ಪ್ರಾಸಾ 13 ಕೃಷ್ಣೇಗೌಡ ರವರು ನಿಶಾನೆ ಪಿ 5 ರಿಂದ 7 ಮತ್ತು 9 ರಿಂದ 12 ರಂತೆ ನನ್ನ ಮುಂದೆ ಹೇಳಿಕೆ ಕೊಟ್ಟಿರುತ್ತಾರೆ.

8. ದಿನಾಂಕ 05.06.2023 ರಂದು ನನಗೆ ವರ್ಗಾವಣೆ ಆಗಿರುವ ಕಾರಣ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 18 ರವರಿಗೆ ಹಸ್ತಾಂತರಿಸಿರುತ್ತೇನೆ.

<u>ಪಾಟೀ ಸವಾಲುಃ ಶ್ರೀ.ಎಸ್.ಎನ್.ಜಿ.., ವಕೀಲರಿಂದ ಆರೋಪಿಗಳ ಪರವಾಗಿಃ</u>

9. ಪಿರ್ಯಾದುದಾರಳು ತನ್ನ ದೂರಿನಲ್ಲಿ ಗಲಾಟೆಯಾದ ದಿನಾಂಕ ಏನೆಂದು ನಮೂದು ಮಾಡಿರುತ್ತಾಳೆ ಎಂದು ನನಗೆ ಈಗ ನೆನಪಿಲ್ಲ. ದೂರು ವಿಜಯಮ್ಮ ನೀಡಿರುವ ಕಾರಣ ಆಕೆಯೇ ಅದಕ್ಕೆ ಸಹಿ ಮಾಡಿರುತ್ತಾಳೆ. ದೂರಿಗೆ ಸಂಬಂಧಿಸಿದಂತ ಜಮೀನಿನ ಸರ್ವೇ ನಂ.56/2 ಆಗಿರುತ್ತದೆ. ಸರ್ವೇ ನಂ.56/2 ಕ್ಕೆ 56/1 ಹೊಂದಿಕೊಂಡಿರುತ್ತದೆ ಎಂದರೆ ಸರಿ. ಪಂಚರಾದ ಗುಡಿಯಯ್ಯ ಮತ್ತು ಮುದ್ದಯ್ಯನಿಗೆ ಪಂಚನಾಮೆಗೆ ಬರುವಂತೆ ನೋಟೀಸ್ ನೀಡಲಾಗಿದೆ. ಸದರಿ ನೋಟೀಸ್‌ನ್ನು ದಿನಾಂಕ 11.04.2023 ರಂದೇ ನೀಡಲಾಗಿದೆ. ಮಹಜರ್ ನ ಬರವಣಿಗೆಯನ್ನು ನಮ್ಮ ಠಾಣಾ ಸಿಬ್ಬಂದಿ WPC ಸೌಮ್ಯ ರವರು ಮಾಡಿಕೊಂಡಿರುತ್ತಾರೆ. ಮಹಜರ್ ನ್ನು ಠಾಣೆಯಲ್ಲಿ ಸೃಷ್ಟಿ ಮಾಡಿ ಅಲ್ಲಿಯೇ ಸಾಕ್ಷಿದಾರರ ಸಹಿಯನ್ನು ಪಡೆದುಕೊಳ್ಳಲಾಗಿದೆ ಎಂದರೆ ಸರಿಯಲ್ಲ. ದಿನಾಂಕ 11.04.2023 ರಂದು ಮಹಜರ್ ನ್ನು ಸ್ಥಳದಲ್ಲಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

10. ಕಚ್ಛಾ ನಕ್ಷೆಯಂತೆ ಯಾರಿಗೂ ನಿವೇಶನಗಳು ಮಂಜೂರಾಗಿಲ್ಲ ಎಂದರೆ ಆ ಬಗ್ಗೆ ನಾನು ಹೇಳಲು ಸಾಧ್ಯವಿಲ್ಲ ಎಂದು ಉತ್ತರಿಸಿರುತ್ತಾರೆ. ಕಚ್ಛಾ ನಕ್ಷೆಯನ್ನು ನನ್ನ ಅನುಕೂಲಕ್ಕೆ ತಕ್ಕಂತೆ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಶಾನೆ ಪಿ 3 ಮತ್ತು 4 ರಲ್ಲಿ ಯಾವ ಸಮಯ ಮತ್ತು ದಿನಾಂಕ ದಂದು ಸದರಿ ಫೋಟೋಗಳನ್ನು ತೆಗೆಯಲಾಗಿದೆ ಎಂದು ಅದರ ಡಿಜಿಟಲ್ ಪ್ರಿಂಟ್ ಬಂದಿರುವುದಿಲ್ಲ ಎಂದರೆ ಸರಿ. ನಮ್ಮ ಠಾಣಾ ಸಿಬ್ಬಂದಿ WPC

ಸೌಮ್ಯ ರವರು ಯಾವುದೇ ಫೋನ್‌ನ್ನು ತಮ್ಮ ಫೋನ್‌ನಿಂದ ತೆಗೆದಿರುವುದಿಲ್ಲ, ನಿಶಾನೆ ಪಿ 3, 4 ಮತ್ತು 13 ನ್ನು ಸೃಷ್ಟನೆ ಮಾಡಲಾಗಿದೆ ಎಂದರೆ ಸರಿಯಲ್ಲ.

11. ದಿನಾಂಕ 2.04.2023 ರಂದು ಪಿರ್ಯಾದುದಾರಳು ಮತ್ತು ಆರೋಪಿಗಳ ಜಾತಿ ಪ್ರಮಾಣ ಪತ್ರವನ್ನು ನೀಡುವಂತೆ ಚನ್ನಪಟ್ಟಣ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿಲ್ಲ ಹಾಗೂ ಕೃತ್ಯ ನಡೆದ ಜಮೀನಿಗೆ ಸಂಬಂಧಿಸಿದಂತ ಮಾಲೀಕತ್ವದ ದಾಖಲಾತಿಯನ್ನು ನೀಡುವಂತೆ ಸಹ ಮನವಿ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ.

12. ದಿನಾಂಕ 15.04.2023 ರಂದು ಸಾಕ್ಷಿದಾರರಾದ ನಿಂಗರಾಜು, ಸಿದ್ದರಾಮು, ಮರಿಮುದ್ದಯ್ಯ, ಚನ್ನರಾಜು, ಗುಡಿಯಯ್ಯ ಮತ್ತು ಮುದ್ದಯ್ಯ ಇವರುಗಳ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಮತ್ತು ದಿನಾಂಕ 18.05.2023 ರಂದು ಸಾಕ್ಷಿದಾರರಾದ ತಮ್ಮಯ್ಯ, ರವಿ, ಮಲ್ಲಿಕಾರ್ಜುನ್, ರೇಣುಕ, ಕೃಷ್ಣೇಗೌಡ, ರಾಜು ಶೆಟ್ಟಿ, ಇವರುಗಳ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

13. ಸರ್ವೇ ನಂ.56/1 ಮತ್ತು 56/2 ಒಂದಕ್ಕೊಂದು ಲಗತ್ತಾಗಿರುವ ಜಮೀನುಗಳಾಗಿದ್ದು, ಪಿರ್ಯಾದುದಾರಳಿಗೆ ಯಾವುದೇ ಜಮೀನು ಮಂಜೂರಾಗದೇ ಇದ್ದರೂ ಸಹ ಆರೋಪಿಗಳಿಗೆ ಸಂಬಂಧಿಸಿದ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದು, ಅದನ್ನು ಪ್ರಶ್ನಿಸಿದಾಗ ಈ ಸುಳ್ಳು ದೂರನ್ನು ರಾಜಕೀಯ ಪ್ರೇರಣೆಯ ಮೇರೆಗೆ ನೀಡಲಾಗಿದೆ ಎಂದರೆ ಸರಿಯಲ್ಲ. ಘಟನೆ ನಡೆದಿದೆ ಎಂದು ಹೇಳುವ ಸಮಯದಲ್ಲಿ ಚುನಾವಣೆ ಘೋಷಣೆಯಾಗಿತ್ತು ಎಂದರೆ ಸರಿ. ಆರೋಪಿಗಳು ಯಾವುದೇ ಕೃತ್ಯ ಎಸಗದೇ ಇದ್ದರೂ ಸಹ ರಾಜಕೀಯ ಪ್ರೇರಣೆಯ ಮೇರೆಗೆ ಅವರ ವಿರುದ್ಧ ತನಿಖೆ ನಡೆಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.